ಮನೆಗೆ ಬಂದವಳೇ, ಅಡುಗೆ ಮಾಡೋದನ್ನೂ ಬಿಟ್ಟು, ಮೊಬೈಲ್ ತೆಗೆದು ಟಕಟಕ ನಂಬರ್ ಒತ್ತಿದಳು. ಉಹುಂ... ಅರಣ್ಯರೋದನ... ಫೋನ್ ರಿಂಗು ಅವಳ ಮುಖಕ್ಕೇ ವಾಪಸ್ ಬಂದು ರಾಚಿತು. ಗೊಣಗಿಕೊಂಡು ಮತ್ತೊಂದು ನಂಬರ್ ಒತ್ತಿದಳು.

'ರೀ ನಾನು ಕಮ್ಲೂ ಅಂತ, ನನ್ನ ಮಗ... ಕಂಪನಿಯಲ್ಲಿ ಕೆಲ್ಸ ಮಾಡ್ತಿದ್ದಾನೆ... ಓದು...'

ಅವಳ ಮಾತನ್ನು ಮುಲಾಜಿಲ್ಲದೆ ಅರ್ಧಕ್ಕೇ ತುಂಡರಿಸಿ, 'ಈಗ ಪುರುಸೊತ್ತಿಲ್ಲ, ನಾಳೆ ಮಾಡಿ' ಅಂತ ಆ ಕಡೆಯಿಂದ ಫೋನ್ ಕುಕ್ಕಿಬಿಡೋದೇ? ಛಲವಂತೆ ಕಮ್ಲೂ, ಇನ್ನೊಂದು ನಂಬರಿನ ಕದ ತಟ್ಟಿದಳು. 'ಏನ್ರೀ ನಿಮ್ಮ ಗೋಳು... ಬೆಳಗ್ಗಿಂದ ಇದು ನೂರನೇ ಫೋನು. ನಾವೇನು ಮನೆಕೆಲಸ ಮಾಡಿಕೊಳ್ಳೋದೋ ಬಿಡೋದೋ?' ಸಿಡುಕಿನ ದನಿ!

ಸ್ಪೀಕರ್‌ನಲ್ಲಿ ಕೇಳಿಸಿಕೊಳ್ತಿದ್ದ ಶ್ರೀಕಂಠೂ – 'ಲೇ, ಇಡೇ ಫೋನು... ಪಾಪ ಅವರ ಕಷ್ಟಾನೂ ಸ್ವಲ್ಪ ಅರ್ಥ ಮಾಡ್ಕೋ... ಇದ್ದಬದ್ದ ಗಂಡಿನೋರೆಲ್ಲ ಒಟ್ಟಿಗೇ ಫೋನ್ ಮಾಡ್ತಿದ್ರೆ ಅವರ ಗತಿಯೇನೇ?' ಹೆಂಡತಿಯ ಉತ್ಸಾಹಕ್ಕೆ ತಣ್ಣೀರೆರಚಿದ. ಆದರೂ ಅವಳ ಹೆಣ್ಣಿನ ಬೇಟೆ ನಿಲ್ಲಲಿಲ್ಲ. ನಾಲ್ಕಾರು ಕಡೆ ರಿಜಿಸ್ಟರ್ ಮಾಡಿಸಿ ಬಂದು, ನೋಟ್‌ಬುಕ್ ಭರ್ತಿ ಹೆಣ್ಣಿನ ವಿವರಗಳನ್ನು ತುಂಬಿಕೊಂಡು ಎಡೆಬಿಡದೆ ಫೋನಾಯಿಸಿದವಳಿಗೆ ನಾನಾ ಬಗೆಯ ಅನುಭವಗಳು... ಕಮ್ಲೂ ನಿರೀಕ್ಷೆ–ಕಲ್ಪನೆಗಳೆಲ್ಲ ಠುಸ್ಸಾಗಿ ಹೋದ್ವು.

"ಪಾಪ... ಹಳೇಕಾಲದಲ್ಲಿ ಹೆಣ್ಣಿನವರನ್ನು ಅದೆಷ್ಟು ಗೋಳು ಹುಯ್ದುಕೊಂಡಿದ್ದಾರಲ್ವಾ ಈ ಗಂಡಿನೋರು, ಅದಕ್ಕೇ ಈಗ 'ಟಿಟ್ ಫಾರ್ ಟ್ಯಾಟ್'' ಎಂದು ಕಮ್ಲೂ ತನಗೆ ತಾನೇ ಸಮಜಾಯಿಷಿ ಕೊಟ್ಟುಕೊಂಡಳು. ಈಗ ಅವಳ ಬೇಟೆ ಆನ್‌ಲೈನಿಗೆ ಶಿಫ್ಟ್ ಆಗಿತ್ತು.

ಹತ್ತಾರು ಸಾವಿರ ರೂಪಾಯಿ ತೆತ್ತು ಮ್ಯಾಟ್ರಿಮೋನಿಯಲ್‌ಗಳಿಗೆ ಸಬ್‌ಸ್ಕ್ರೈಬ್ ಆಗಿದ್ದಾಯ್ತು. ಮಗನ ಬೆನ್ನುಹತ್ತಿ ಕಷ್ಟಪಟ್ಟು ಕಂಪ್ಯೂಟರಿನ ಆಪರೇಶನ್ಸ್ ಕಲ್ತುಕೊಂಡು ಬೆಳಗಿನಿಂದ ಸಂಜೆವರೆಗೂ ಕನ್ನಡಕ ಹಾಕ್ಕೊಂಡು ವಿದ್ಯಾರ್ಥಿ ಥರ ಅದರ ಮುಂದೆ ಕೂತು, ಪಕ್ಕದಲ್ಲೊಂದು ನೋಟ್‌ಬುಕ್ ತೆಗೆದಿಟ್ಕೊಂಡು ರೆಡಿಯಾಗಿದ್ದಳು. ನೂರಾರು ಹೆಣ್ಣುಗಳ ಫೋಟೊಗಳನ್ನು ಮೇಲಿನಿಂದ ಕೆಳಗೆ, ಕೆಳಗಿನಿಂದ ಮೇಲಕ್ಕೆ ಸ್ಕ್ರೋಲ್ ಮಾಡಿದ್ದೇ ಮಾಡಿದ್ದು. ಉಹುಂ... ಒಂದಕ್ಷರವೂ ನೋಟ್‌ಬುಕ್ಕಿನಲ್ಲಿ ಮೂಡಲಿಲ್ಲ.

ಕಮ್ಲೂಗ್ಯಾಕೋ ಪಿತ್ತ ನೆತ್ತಿಗೇರಿತು. ಗಂಡನ್ನ ಎಳ್ಕೊಂಡು ಬಂದು ಕಂಪ್ಯೂಟರ್ ಮುಂದೆ ಕೂಡಿಸಿದಳು. ಹತ್ತು ನಿಮಿಷದಲ್ಲೇ ಶ್ರೀಕಂಠೂಗೆ ರೋಸಿಹೋಯ್ತು... 'ಇದೇನೇ... ವಯಸ್ಸು ಸರಿಹೋದ್ರೆ, ಗೋತ್ರ ಸರಿಹೋಗಲ್ಲ... ಎರಡೂ ಸರಿಹೋದ್ರೆ, ಫಾರಿನ್ ವರಾನೇ ಬೇಕಂತಲ್ಲ... ಬರೀ ಬಿ.ಇ. ಸಾಲದಂತೆ ಕಣೆ, ಮಾಸ್ಟರ್ ಡಿಗ್ರಿ, ಜೊತೆಗೆ ಪಿ.ಎಚ್‌ಡಿನೂ ಕಂಪಲ್ಸರಿಯಂತೆ... ಬೆಂಗಳೂರಿನಲ್ಲಿ ಸ್ವಂತ ಮನೆ–ಆಸ್ತೀನೂ ಇದ್ದು ಒಬ್ಬನೇ ಮಗನಾಗಿರಬೇಕಂತೆ' ಗಾಬರಿಯಿಂದ ಬಾಯ್ತೆಗೆದ ಶ್ರೀಕಂಠೂ.

ಕಮ್ಲೂ, 'ರೀ ಎದ್ದೇಳ್ರೀ... ಹುಡುಗಿ ಹೇಗಿದ್ದಾಳೆಂತ ನೋಡೋಣ' ಎಂದು ಗಂಡನನ್ನೆಬ್ಬಿಸಿ, ಬಗ್ಗಿ ನೋಡಿದವಳೇ 'ರೀ ಇದೇನ್ರೀ... ಹುಡ್ಗಿ ಫೋಟೊನೇ ಇಲ್ವಲ್ಲ... ಬರೀ ಔಟ್‌ಲೈನ್ ಚಿತ್ರ. ಹೆಸರು, ಇದೇನ್ರೀ ಮಾಡರ್ನ್ ಹೆಸ್ರು ಲೇಟರ್?'

'ಲೇಟರ್ ಅಂದ್ರೆ ಫೋಟೊ ಈಗಿಲ್ಲ, ಆಮೇಲೆ ಅಂತಾನೇ' ವಿವರಿಸಿದ ಶ್ರೀಕಂಠೂ. 'ಫೋನ್ ನಂಬರೂ ಇಲ್ಲ... ಮೆಸೇಜ್ ಮಾಡಬೇಕಂತೆ...' ಅಂತ ಕಮ್ಲೂ ಎಲ್ಲರಿಗೂ ಪ್ರತ್ಯೇಕವಾಗಿ ಮೆಸೇಜ್ ಮಾಡಿದಳು. ಒಂದಕ್ಕೂ ಉತ್ತರ ಇರಲಿಲ್ಲ. ಒಬ್ಬಿಬ್ಬರು ಕೃಪೆ ಮಾಡಿ ಫೋನ್ ನಂಬರ್ ಹಾಕಿದ್ದನ್ನು ಕಂಡು, ಕಮ್ಲೂ ನಿಧಿ ಕಂಡವಳಂತೆ ಸರ್ರನೆ ಫೋನ್ ಕೈಗೆತ್ತಿಕೊಂಡಳು.

'ನಮಸ್ಕಾರ ನಾನು ಕಮಲಾ ಶ್ರೀಕಂಠಯ್ಯ, ಬೆಂಗಳೂರಿನಿಂದ ಮಾತಾಡ್ತಿದ್ದೀನಿ' – ಉತ್ಸಾಹ ಶಿಖರವಾಯ್ತು. ಅತ್ತಲಿಂದ ಪುಟಕ್ಕನೆ ನೆಗೆದ ಪ್ರಶ್ನೆ – 'ನಿಮ್ಮ ಮಗಂದು ಪ್ಯಾಕೇಜು ಎಷ್ಟು... ವರ್ಷಕ್ಕೆ 35 ಲಕ್ಷಕ್ಕೆ ಕಡ್ಮೆ ಇದ್ರೆ ನಮ್ಮ ಹುಡುಗಿ ಒಪ್ಪಲ್ಲ ಬಿಡಿ' ಮುಂದೆ ಅವಳ ಸಂಭಾಷಣೆಗೆ ಫುಲ್‌ಸ್ಟಾಪ್ ಹಾಕಿದಳು ಆ ಕನ್ಯಾಮಾತಾ.

ಇನ್ನೊಬ್ಬರು 'ಇಲ್ಲಾರೀ, ಎರಡು ವರ್ಷ ವ್ಯತ್ಯಾಸ ಆಗಲ್ಲಾಂತಾಳೆ ನಮ್ಮ ಹುಡುಗಿ... ಆರು ತಿಂಗಳು, ವರ್ಷ ಅಷ್ಟೇ ಅಂತರ ಆಗಬೇಕು. ಒಂದೇ ವಯಸ್ಸಾದರೂ ಓಕೆ' ಎನ್ನೋದೇ? ಕಮ್ಲೂ ಮತ್ತೊಂದು ನಂಬರ್ ತಿರುಗಿಸಿದಳು 'ಅವಳು ತುಂಬಾ ಬಿಜಿ... ವರ್ಕ್ ಫ್ರಂ ಹೋಮು... ಸದಾ ಕಾಲುಗಳು, ಜೂಮ್ ಮೀಟಿಂಗ್, ಪ್ರಾಜೆಕ್ಟ್ಸ್ ಇರತ್ವೆ, ನಿಮ್ಮ ಹುಡುಗ ತುಂಬಾ ಅಡ್ಜಸ್ಟ್ ಮಾಡಿಕೊಳ್ಳಬೇಕಾಗತ್ತೆ ನೋಡಿ.... ಅಡುಗೆ–ತಿಂಡಿ ಮಾಡೋದೆಲ್ಲ ಎಕ್ಸ್‌ಪೆಕ್ಟ್ ಮಾಡೋ ಹಾಗಿಲ್ಲ... ಹೇಗೂ ಸ್ವಿಗ್ಗಿ ಇದೆಯಲ್ಲ. ಕೈ ತುಂಬಾ ಸಂಪಾದನೆ, ಮೈ ತುಂಬಾ ಕೆಲ್ಸ, ಉಳಿದ ಯಾವುದಕ್ಕೂ ಪುರುಸೊತ್ತಿಲ್ಲ' ಈ ಸಲ ಕಮಲೂನೇ ಫೋನ್ ಕುಕ್ಕಿದಳು.

ದಿನವಿಡೀ ಒಂದೇ ಸಮನೆ ಮೌಸ್ ಹಿಡಿದು ಚಕ್ರ ತಿರುಗಿಸಿ ತಿರುಗಿಸಿ ಕಮ್ಲೂಗೆ ರಾತ್ರಿಯೆಲ್ಲ ಕೈ ಬೆರಳಿನಲ್ಲಿ ಛಳಕೋ ಛಳಕು... 'ಅಮ್ಮಾ... ನೋವು... ಉರಿ...' ಅಂತ ಬೊಂಬಡಿ ಹೊಡೆದವಳನ್ನು ಆಸ್ಪತ್ರೆಗೆ ಕರ್ಕೊಂಡು ಹೋದ ಶ್ರೀಕಂಠೂ. ಕಮ್ಲೂ ಅಂಗೈ ಬೆರಳುಗಳಿಗೆಲ್ಲ ಶಾಕ್ ಕೊಟ್ಟು ನಾನಾ ಪರೀಕ್ಷೆ ಮಾಡಿ ಕೊನೆಗೆ 'ಕಾರ್ಪಾಲ್ ಟನಲ್ ಸಿಂಡ್ರೋಮ್' ಅಂತ ಹೆಸರಿಸಿ, ರಾತ್ರಿ ಹೊತ್ತು ಕೈಗೆ ತೊಟ್ಟುಕೊಳ್ಳಲು ವಿಶೇಷ ಗ್ಲೌಸ್ ಕೊಟ್ಟು ಕಳಿಸಿದ್ದಲ್ಲದೆ, ಒಂದು ವಾರ ಪೂರ್ತಿ ನ್ಯುರೋಬಿಯನ್ ಇಂಜೆಕ್ಷನ್ನು, ಕ್ಯಾಪ್ಸೂಲ್ಸು.

ಕಮ್ಲೂ ಕೈಗಳಿಗೆ ಒಂದು ವಾರ ಕಂಪಲ್ಸರಿ ರೆಸ್ಟು! ಆಮೇಲೆ ಮತ್ತೆ ಬಂತು ಕೈಗೆ ಫೋನು. ಬರೀ ರಿಂಗಿಂಗು... ನೋ ಆನ್ಸರ್ರು... ಮದುವೆ ದಲ್ಲಾಳಿ ಒಂದು ಹೆಂಗಸು ನೇರವಾಗೇ ಹೇಳಿಬಿಟ್ಟಳು – 'ನೋಡ್ರೀ, ಇದು ಹಳೇಕಾಲ ಅಲ್ಲ, ಈಗ ಹುಡುಗಿಯರದೇ ಡಿಮ್ಯಾಂಡು, ಮನೇಲಿ ರಾಹು–ಕೇತು ಇರಬಾರದು, ಅರ್ಥಾತ್ ಹಳೇ ಫರ್ನಿಚರ್ಸ್ ಇದ್ರೆ ಬಿಲ್ ಕುಲ್ ಆಗಲ್ಲ, ಬೆಂಗಳೂರಿನಲ್ಲಿ ಸ್ವಂತ ಮನೆ–ಆಸ್ತಿ, ಅಡ್ಜಸ್ಟ್ ಮಾಡ್ಕೊಳ್ಳೋ ಗಂಡಿದ್ರೆ ಹೇಳಿ, ಲಕ್ಷಗಟ್ಲೆ ಪ್ಯಾಕೇಜ್ ಕೇಳ್ತಾರೆ' ಮುಖಕ್ಕೆ ಹೊಡೆದ ಹಾಗೆ ಹೇಳಿದಾಗ, ಕಮ್ಲೂ ಮೂರ್ಛೆ ಹೋಗೋದೊಂದು ಬಾಕಿ.

ಹಗಲೂ–ರಾತ್ರಿ ಫೋನ್‌ನಲ್ಲಿ ತಲೆಹೂತು ಕುತ್ತಿಗೆ ನೀವಿಕೊಳ್ತಿದ್ದನ್ನು ಕಂಡ ಮಗರಾಯ 'ಅಮ್ಮಾ ಸಾಕ್ ಬಿಡಮ್ಮ... ಮದುವೆ ಆಗ್ಲೇಬೇಕೂಂತ ಇಲ್ಲ... ಯಾವ ರಾಜವಂಶ ನಿಂತುಹೋಗತ್ತೆ... ಯಾಕೆ ಹೆಣ್ಣು ಹೆತ್ತವರನ್ನ ಸುಮ್ನೆ ಬೇತ್ಲಾಡ್ತೀರಾ...' ಎಂದು ಗುಟುರು ಹಾಕಿದ್ದೂ ಉಂಟು.

ಕಮ್ಲೂ 'ಹೌದು ಕಣೋ, ಹಿಂದೆ ಗಂಡಿನ ಮನೆಗೆ ಅಲೆದೂ ಅಲೆದೂ ಹೆಣ್ಣಿನವರ ಏಳು ಜೊತೆ ಎಕ್ಕಡಗಳು ಸವೆದುಹೋಗ್ತಿದ್ವಂತೆ. ಈಗ್ನೋಡು ನಮ್ಮ ಪಾಡು, ಎರಡು ಮೌಸ್‌ಗಳು



ಸವೆದುಹೋದರೂ ಒಂದು ಸಂಬಂಧವೂ ಕುದುರಲಿಲ್ವೇ?' ಎಂದು ತನ್ನ ಮಾತಿಗೆ ಷರಾ ಬರೆದಳು.

ಒಂದು ಎರಡು ಮೂರು ವರ್ಷಗಳಲ್ಲಿ ಕಮ್ಲೂ ಕೈ 'ಕಾರ್ಪಾಲ್ ಟನಲ್ ಸಿಂಡ್ರೋಮ್' ವಾಸಿಯಾಗಿದೆ. ನೋಟ್‌ಬುಕ್‌ಗಳೆಲ್ಲ ಕಪಾಟು ಸೇರಿವೆ. ಒಂದಿನ ಮಗನನ್ನು ಜೋರಾಗಿ ಕೂಗು ಹಾಕಿ ಕರೆದಳು – 'ಅಲ್ವೋ ನಿಮ್ಮ ಆಫೀಸಿನಲ್ಲಿ ಹುಡುಗಿಯರಿಲ್ವೇ? ಸುಮ್ನೆ ನಮಗ್ಯಾಕೋ ಕಾಟ ಕೊಡ್ತೀ? ಲವ್ ಗಿವ್ ಮಾಡಕ್ಕೆ ಬರಲ್ವೇನೋ ದಡ್ಡ... ಜಾತಿ, ಕುಲ, ಗೋತ್ರ ನೋಡದೆ ನಿನಗೆ ಖುಷಿ ಬಂದ ಹುಡುಗೀನ ಆರಿಸ್ಕೋ ಹೋಗು?' ಎಂದು ಒದರಿದ ಮೇಲೆ ಕಮ್ಲೂಗೆ ದೊಡ್ಡ ನಿರಾಳ.

ಪ್ರತಿಕ್ರಿಯಿಸಿ: feedback@sudha.co.in